# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

**"ಜ್ಞಾನ ಸಂಗಮ", ಬೆಳಗಾವಿ 590 018, ಕರ್ನಾಟಕ ರಾಜ್ಯ**

ಡಾ॥ ಹೆಚ್. ಎಸ್. ಜಗನ್ನಾಥ ರೆಡ್ಡಿ ಬಿ.ಇ.,ಎಂ.ಇ., ಪಿಹೆಚ್.ಡಿ.
ಕುಲಸಚಿವರು

ದೂರವಾಣಿ ಸಂ: (0831) – 2405468
ಫ್ಯಾಕ್ಸ್ ಸಂ : (0831) – 2405467


ಉಲ್ಲೇಖ ಸಂ. : ವಿತಾವಿ/ಡಿಪಿಎಆರ್/2018-19/1937

ದಿನಾಂಕ : 18 JAN 2019

## ಪ್ರಕಟಣೆ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ, ಇಲ್ಲಿ ನೇಮಕಾತಿ ಪ್ರಕ್ರಿಯೆ ಬಗ್ಗೆ ಸಾರ್ವಜನಿಕರಿಂದ ಹಲವಾರು ದೂರವಾಣಿ ಕರೆಗಳು ಬರುತ್ತಿವೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಮತ್ತು ಅಧೀನ ಪ್ರಾದೇಶಿಕ ಕಛೇರಿಗಳಾದ ಬೆಳಗಾವಿ, ಬೆಂಗಳೂರು, ಮೈಸೂರು, ಹಾಗೂ ಕಲಬುರಗಿ ಮತ್ತು ಘಟಕ ಯುಬಿಡಿಟಿ ಇಂಜನಿಯರಿಂಗ್ ಕಾಲೇಜ್, ದಾವಣಗೆರೆ, ಇಲ್ಲಿ ಯಾವುದೇ ಬೋಧಕ / ಬೋಧಕೇತರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನಡೆಯುತ್ತಿರುವುದಿಲ್ಲ ಹಾಗೂ ಗುತ್ತಿಗೆ ಆಧಾರದ ಮೇಲೆ ಸಹ ನೇಮಕಾತಿ ಮಾಡಿಕೊಳ್ಳಲಾಗುತ್ತಿಲ್ಲ. ಈ ಹಿನ್ನಲೆಯಲ್ಲಿ, ಸಾರ್ವಜನಿಕರಲ್ಲಿ ವಿನಂತಿಸುವುದೇನೆಂದರೆ, ಯಾರಾದರೂ ಕೆಲಸ ಕೊಡಿಸುತ್ತೇವೆಂದು ಹಣ ಪಡೆದು ಆಮಿಷ ನೀಡಿದ್ದಲ್ಲಿ, ಯಾವುದೇ ಆಶೆ, ಆಮಿಷಕ್ಕೆ ಒಳಗಾಗಬಾರದೆಂದು ತಿಳಿಸಲಾಗಿದೆ. ಒಂದು ವೇಳೆ ಆಮಿಷಕ್ಕೆ ಒಳಗಾಗಿದ್ದಲ್ಲಿ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ, ಜವಾಬ್ದಾರರಾಗಿರುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಲ್ಲಿ ತಿಳುವಳಿಕೆ ನೀಡಲಾಗಿದೆ.

ಮುಂದುವರಿದು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿಯಲ್ಲಿ ಯಾವುದೇ ನೇಮಕಾತಿ ಪ್ರಕ್ರಿಯೆ ನಡೆದಲ್ಲಿ, ವಿ.ತಾ.ವಿ. ಯ ಅಂತರ್‌ಜಾಲದಲ್ಲಿ ಪ್ರಕಟಿಸಲಾಗುವುದು.

18/01/19
**ಕುಲಸಚಿವರು**

**ಪ್ರತಿಯನ್ನು ಮಾಹಿತಿಗಾಗಿ :**

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ಕುಲಸಚಿವರು (ಮೌಲ್ಯಮಾಪನ), ವಿ.ತಾ.ವಿ., ಬೆಳಗಾವಿ.
3. ಹಣಕಾಸು ಅಧಿಕಾರಿಗಳು, ವಿ.ತಾ.ವಿ., ಬೆಳಗಾವಿ.
4. ಪ್ರಾಚಾರ್ಯರು, ಯು.ಬಿ.ಡಿ.ಟಿ. ಇಂಜನೀಯರಿಂಗ್ ಕಾಲೇಜ್, ದಾವಣಗೆರೆ, ಇವರಿಗೆ ತಮ್ಮ ಕಾಲೇಜಿನ ಪ್ರಕಟನಾ ಫಲಕದಲ್ಲಿ ಸದರಿ ಪ್ರಕಟಣೆಯನ್ನು ಪ್ರಕಟಿಸಲು ಸೂಚಿಸಲಾಗಿದೆ.
5. ಪ್ರಭಾರಿ ಪ್ರಾದೇಶಿಕ ನಿರ್ದೇಶಕರು, ವಿ.ತಾ.ವಿ.ಯ ಪ್ರಾದೇಶಿಕ ಕಛೇರಿಗಳಾದ ಬೆಳಗಾವಿ, ಮೈಸೂರು, ಬೆಂಗಳೂರು ಹಾಗೂ ಕಲಬುರಗಿ, ಇವರಿಗೆ ತಮ್ಮ ಪ್ರಾದೇಶಿಕ ಕಛೇರಿಯ ಪ್ರಕಟನಾ ಫಲಕದಲ್ಲಿ ಸದರಿ ಪ್ರಕಟಣೆಯನ್ನು ಪ್ರಕಟಿಸಲು ಸೂಚಿಸಲಾಗಿದೆ.
6. ಸಂಯೋಜಕರು, ವಿ.ತಾ.ವಿ.ಯ ಸ್ನಾತಕೋತ್ತರ ಕೇಂದ್ರ, ಬೆಳಗಾವಿ, ಮೈಸೂರು, ಕಲಬುರಗಿ ಹಾಗೂ ಮುದ್ದೇನಹಳ್ಳಿ, ಇವರಿಗೆ ತಮ್ಮ ಸ್ನಾತಕೋತ್ರ ಕೇಂದ್ರದ ಪ್ರಕಟನಾ ಫಲಕದಲ್ಲಿ ಸದರಿ ಪ್ರಕಟಣೆಯನ್ನು ಪ್ರಕಟಿಸಲು ಸೂಚಿಸಲಾಗಿದೆ.
7. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಧಾನ ಕಛೇರಿಯ ಆವರಣದಲ್ಲಿರುವ ಎಲ್ಲಾ ಕಛೇರಿಗಳ ಮುಖ್ಯಸ್ಥರುಗಳಿಗೆ.
8. ನಿರ್ದೇಶಕರು, ವಿ.ತಾ.ವಿ.ಯ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಕೇಂದ್ರ, ದಾಂಡೇಲಿ ಹಾಗೂ ಮುದ್ದೇನಹಳ್ಳಿ, ಇವರಿಗೆ ತಮ್ಮ ಕೇಂದ್ರದ ಪ್ರಕಟನಾ ಫಲಕದಲ್ಲಿ ಸದರಿ ಪ್ರಕಟಣೆಯನ್ನು ಪ್ರಕಟಿಸಲು ಸೂಚಿಸಲಾಗಿದೆ.
9. ವಿಶೇಷಾಧಿಕಾರಿಗಳು, ಸಿ.ಎನ್.ಸಿ., ವಿ.ತಾ.ವಿ., ಬೆಳಗಾವಿ, ಇವರಿಗೆ ಸದರಿ ಪ್ರಕಟಣೆಯನ್ನು ವಿ.ತಾ.ವಿ.ಯ ಅಂತರ್‌ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.